ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

23

ಇಲಾಖೆ / ವಿಷಯ : DEPARTMENT / SUBJECT: ಲೋಕಸಭೆ

ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE : 29/8/2020

# ಅಧಿವೇಶನಕ್ಕೆ ಮುನ್ನ ಕೊರೊನಾ ತಪಾಸಣೆ

**ಹೊಸದಿಲ್ಲಿ:** ಕೋವಿಡ್ ಪ್ರಕರಣಗಳಿಗೆ ಸಾಕ್ಷಿಯಾಗಲಿರುವ ಸಂಸತ್ ಮುಂಗಾರು ಅಧಿವೇಶನಕ್ಕೆ ಸಿದ್ಧತೆ ಬಿರುಸು ಪಡೆದಿದೆ. ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಶುಕ್ರವಾರ ಸಂಸತ್ತಿನ ಉಭಯ ಸದನಗಳು, ಆರೋಗ್ಯ ಸಚಿವಾಲಯ ಮತ್ತು ಡಿಆರ್‌ಡಿಒ ಸೇರಿದಂತೆ ಹಲವು ಸಂಸ್ಥೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಅಂತಿಮ ಸಿದ್ಧತೆಗಳ ಬಗ್ಗೆ ಚರ್ಚಿಸಿದರು.



ಲೋಕಸಭೆ ಮತ್ತು ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿಗಳೂ ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯ ಬಳಿಕ ಬಿರ್ಲಾ ಅವರೇ ತಮ್ಮ ಟ್ವಿಟರ್ ಖಾತೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ್ದು, ಸಭೆಯ ವಿಡಿಯೊವನ್ನೂ ಪೋಸ್ಟ್ ಮಾಡಿದ್ದಾರೆ. "ಅಧಿವೇಶನ ಆರಂಭವಾಗುವುದಕ್ಕೆ ಕನಿಷ್ಠ 72 ಗಂಟೆಗಳ ಮುನ್ನ ಎಲ್ಲಾ ಸಂಸದರು ಹಾಗೂ ಅವರ ಆಪ್ತ ಸಿಬ್ಬಂದಿ ಕೊರೊನಾ ಟೆಸ್ಟ್ ಮಾಡಿಸಬೇಕು." ಎಂದು ಬಿರ್ಲಾ ಮನವಿ ಮಾಡಿದ್ದಾರೆ. ಸೋಂಕು ತಡೆಗೆ ಸಂಸತ್ ರೂಪಿಸಿರುವ ಮಾರ್ಗಸೂಚಿಗಳಲ್ಲಿ ಇದೂ ಸಹ ಸೇರಿದೆ.

"ಸುಗಮ ಕಲಾಪ ನನ್ನ ಮೊದಲ ಆದ್ಯತೆ. ಜತೆಗೆ ಸಾಮಾಜಿಕ ಅಂತರದಂತಹ ಆರೋಗ್ಯ ಸಂಬಂಧಿತ ನಿಯಮಗಳನ್ನೂ ಕಡ್ಡಾಯವಾಗಿ ಅನುಸರಿಸಲಾಗುವುದು. ಸ್ಯಾನಿಟೈಸೇಷನ್ ಸೇರಿದಂತೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ," ಎಂದು ಅವರು ತಿಳಿಸಿದ್ದಾರೆ. ಸೆ.14ರಿಂದ ಅ.1ರವರೆಗೂ ಅಧಿವೇಶನ ನಡೆಯಲಿದೆ. ಪ್ರಸಕ್ತ ಅಧಿವೇಶನದಲ್ಲಿ ಉಭಯ ಸದನಗಳಲ್ಲಿ 11 ಸುಗ್ರೀವಾಜ್ಞೆಗಳನ್ನು ವಿಧೇಯಕಗಳಾಗಿ ಮಂಡಿಸಿ, ಅನುಮೋದನೆ ಪಡೆಯಲು ಸರಕಾರ ಉದ್ದೇಶಿಸಿದೆ.

**ಪ್ರಶ್ನೋತ್ತರ ಕಡಿತ ಬೇಡ:** ಅಧಿವೇಶನದಲ್ಲಿ ಪ್ರಶ್ನೋತ್ತರ ಕಲಾಪ ಹಾಗೂ ಸದಸ್ಯರ ಪ್ರಶ್ನೆ ಕೇಳುವ ಹಕ್ಕನ್ನು ಮೊಟಕುಗೊಳಿಸಬಾರದು ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧುರಿ ಸ್ಪೀಕರ್‌ಗೆ ಮನವಿ ಮಾಡಿದ್ದಾರೆ.

## ವಾರಾಂತ್ಯದಲ್ಲೂ ಕಲಾಪ

ಕಡಿಮೆ ಅವಧಿಯ ಅಧಿವೇಶನ ನಡೆಸಬೇಕಾಗಿರುವುದರಿಂದ ವಾರಾಂತ್ಯದ ರಜೆ ಇಲ್ಲದೆ ಕಲಾಪಗಳನ್ನು ನಡೆಸಲು ಸರಕಾರ ನಿರ್ಧರಿಸಿದೆ.



ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಈ ವಿಷಯ ತಿಳಿಸಿದ್ದು, "ಉಭಯ ಸದನಗಳೂ ದಿನಕ್ಕೆ ನಾಲ್ಕು ಗಂಟೆ ಮಾತ್ರ ಕಲಾಪ ನಡೆಸಲಿವೆ. ವಾರಾಂತ್ಯಕ್ಕೆ ರಜೆ ಕೊಟ್ಟರೆ ಸಂಸದರು ಪ್ರಯಾಣ ಬೆಳೆಸುತ್ತಾರೆ ಮತ್ತು ಇದರಿಂದ ಸೋಂಕಿನ ಅಪಾಯ ಹೆಚ್ಚಾಗುತ್ತದೆ. ಅಲ್ಲದೆ, ವಾರಾಂತ್ಯಕ್ಕೆ ರಜೆ ಕೊಟ್ಟರೆ ಅಕ್ಟೋಬರ್ 1ರ ಬಳಿಕವೂ ಕಲಾಪ ವಿಸ್ತರಿಸುವುದು ಅನಿವಾರ್ಯವಾಗಬಹುದು. ಕಲಾಪವನ್ನು ವಿಸ್ತರಿಸುತ್ತಾ ಹೋದಲು ಸುರಕ್ಷತೆ ದೃಷ್ಟಿಯಿಂದ ಒಳ್ಳೆಯದಲ್ಲ," ಎಂದು ಹೇಳಿದ್ದಾರೆ.